



ಒಂದು ದಿನ ನಮ್ಮ ಪಕ್ಕದ ಮನೆಯ ಹಿರಿಯರನ್ನು ಕೇಳಿದೆ– 'ನಿಮ್ಮ ಮನೆಯಲ್ಲಿ ವಿಷ ಇದೆಯೇ?' ಎಂದು. ಅವರಿಗೆ ಅದನ್ನು ಕೇಳಿ ತುಂಬಾ ಸಂಕಟವಾಯಿತು. 'ಯಾಕ್ ಸ್ವಾಮಿ, ನಿಮಗೂ ನಿಮ್ಮ ಹೆಂಡತಿಗೂ ಏನಾದರೂ..?' ಎಂದು ಸಂಶಯದಿಂದ ಕೇಳಿದರು! ಜತೆಗೆ ಅನುಕಂಪದಿಂದ ಬುದ್ಧಿವಾದವನ್ನೂ ಹೇಳತೊಡಗಿದರು. ನನ್ನ ವಿಚಾರ ಬೇರೆಯೇ ಇತ್ತು– ನಾವು ಬಳಸುವ ಅನೇಕ ಬಗೆಯ ರಾಸಾಯನಿಕಗಳು ನಮ್ಮ ಆರೋಗ್ಯದ ಮೇಲೆ ಏನು ದುಷ್ಪರಿಣಾಮ  ಬೀರುತ್ತವೆ ಎಂಬ ಕುರಿತು ಆಲೋಚಿಸುತ್ತಿದ್ದೆ. ಆ ನಿಟ್ಟಿನಲ್ಲಿ ಹಿಂದಿನ ದಿನ ರಾತ್ರಿಯಷ್ಟೇ ಹೆಚ್ಚು ನಿಖರವಾಗಿ ಅರಿವಿಗೆ ಬಂದ ಒಂದು ವಿಚಾರವನ್ನು ಈ ಹಿರಿಯರೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಆದರೆ ಅದಾಗಲಿಲ್ಲ.

ಈಗ ಅದೇ ಪ್ರಶ್ನೆಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ– ನಿಮ್ಮ ಮನೆಯಲ್ಲಿ ವಿಷ ಇದೆಯೆ? ನೀವೂ ಗಾಬರಿಯಾಗಬಹುದು. ನನ್ನ ಪ್ರಕಾರ, ನಿಮ್ಮ ಮನೆಯಲ್ಲಿ ನಿಮಗೇ ಗೊತ್ತಿಲ್ಲದಂತೆ ವಿಷ ಇರುವ ಸಾಧ್ಯತೆ ಇದೆ.

ಇಲ್ಲಿ ನೋಡಿ, ಇದೇನು? ಇದು ಫಿನಾಯಿಲ್, ನೆಲ ಗುಡಿಸಿದ್ದು ಸಾಲದು ಎಂದು ಒರೆಸಲು ಇರುವ ದ್ರವ. ಇದೇನು? ಜಿರಲೆ ಔಷಧಿ, ಕಿರಿಕಿರಿ ಉಂಟುಮಾಡುವ ಈ ಕೀಟಗಳ ನಾಶಕ್ಕಾಗಿ. ಮತ್ತೆ ಇದು? ಸೊಳ್ಳೆ ಬತ್ತಿ. ಇಲ್ಲೇನೋ ಇದೆ? ಓ.. ಮನೆಯಲ್ಲಿ ಇಲಿಗಳ ಕಾಟ, ಅದಕ್ಕೆ ಮದ್ದು, ಪಾಷಾಣ. ಇದೇನು ಅಡುಗೆ ಕಟ್ಟೆಯ ಮೇಲೆ ಬಿಳಿ ಗೆರೆಗಳು? ಲಕ್ಷ್ಮಣ ರೇಖೆಗಳು, ಇರುವೆಗಳಿಗೆ. ಇದನ್ನು ಬರೆಯುವ ಬಳಪದಂಥ ಉಂಡೆ ಇಲ್ಲಿದೆ ನೋಡಿ, ಅದು ಡಿಡಿಟಿ. ಅದು ಸರಿ, ಈ ತರಕಾರಿ ಬೆಳೆಗೆ ಬಳಸುವ ಕೀಟ ನಾಶಕ ಏಕಿದೆ? ಅದಾ.. ಅದು ನಮ್ಮದೊಂದು ತೋಟ ಇದೆ, ಅಲ್ಲಿಗೆ ಬೇಕಾಗಿತ್ತು.. ಇಟ್ಟಿದ್ದೇವೆ. ಅರೆ ಇದೇನು ಗ್ಯಾರೇಜಿನಲ್ಲಿ? ಅದೂ.. ಎಮರ್ಜೆನ್ಸಿಗೆ ಇರಲಿ ಅಂತ ಒಂದು ಲೀಟರ್ ಪೆಟ್ರೋಲು.

–ಹೀಗೆ ಯಾರದೇ ಮನೆಯಲ್ಲಿ ಸುತ್ತಾಡಿ ನೋಡಿದರೆ ಹಲವಾರು ವಿಷಕಾರಿ ವಸ್ತುಗಳು ಇರುವುದು ಕಂಡುಬರುತ್ತದೆ. ಆದರೆ ಹೆಚ್ಚಿನವು ಮಾರುವೇಷದಲ್ಲಿವೆ, ಅವು ವಿಷ ಎಂದು ನಮಗೆ ಅನ್ನಿಸುವುದೇ ಇಲ್ಲ.

ಅಂದ ಹಾಗೆ, ವಿಷ ಎಂದರೇನು? ಸೇವಿಸಿದಾಗ ಅಸ್ವಸ್ಥತೆ ಅಥವಾ ಸಾವನ್ನು ತರುವಂಥ ಪದಾರ್ಥವೇ ವಿಷ. ಈ ಲೆಕ್ಕದಲ್ಲಿ ನಾವು ಮೇಲೆ ನೋಡಿದ ಎಲ್ಲವೂ ವಿಷಗಳೇ. ಅವು ಮನೆಯಲ್ಲಿನ ನಮಗೆ ಬೇಡವಾದ ಪ್ರಾಣಿ, ಕೀಟ ಇತ್ಯಾದಿ ಜೀವಿಗಳನ್ನು ಕೊಲ್ಲುತ್ತವೆ. ಅವು ಜೀವಿಗಳಾದರೆ ನಾವೂ ಜೀವಿಗಳಲ್ಲವೇ? ಅವು ನಮಗೂ ವಿಷಕಾರಿಯಲ್ಲವೇ.. ಎಂಬ ಪ್ರಶ್ನೆಯನ್ನು ನಾವು ಯಾರೂ ಕೇಳಿಕೊಳ್ಳುತ್ತಿಲ್ಲ.

## ಪ್ರವೇಶಕ್ಕೆ ಹಲವು ಹಾದಿ

ಯಾವುದೇ ವಿಷಕಾರಿ ವಸ್ತು ನಮ್ಮ ದೇಹದ ಸಂಪರ್ಕಕ್ಕೆ ಬಂದಾಗ ಅಥವಾ ದೇಹದೊಳಗೆ ಸೇರಿಕೊಂಡಾಗ ಅದು ಅಪಾಯಕಾರಿ: ಅಸ್ವಸ್ಥತೆಯಿಂದ ಹಿಡಿದು